# ಯಾರು ಆದರ್ಶಪ್ರಾಯರು?

- ವೈ. ಶಂಕರನಾರಾಯಣ ರಾವ್, ಪಡುಬಿದ್ರಿ

ಹೆಣ್ಣು ಹೆಣ್ಣಾದೊಡೆ ಗಂಡಿನ ಸೂತಕ
ಗಂಡು ಗಂಡಾದೊಡೆ ಹೆಣ್ಣಿನ ಸೂತಕ
ಮನದ ಸೂತಕ ಹಿಂಗಿದೊಡೆ
ತನುವಿನ ಸೂತಕಕ್ಕೆ ನೆರಹುಂಟೇ ಅಯ್ಯಾ?
ಮೊದಲಿಲ್ಲದ ಸೂತಕಕ್ಕೆ ಮರುಳಾಯಿತು ಜಗವೆಲ್ಲ
ಎನ್ನ ದೇವ ಮಲ್ಲಿಕಾರ್ಜುನನೆಂಬ
ಗರುವಂಗೆ ಜಗವೆಲ್ಲಾ ಹೆಣ್ಣು ನೋಡಾ!

“ಹೆಣ್ಣು ಗಂಡಿನದ್ದೇನು ಹೆಚ್ಚುಗಾರಿಕೆಯೆಂದು, ಗಂಡು ಹೆಣ್ಣಿನದ್ದೇನು ಹೆಚ್ಚುಗಾರಿಕೆಯೆಂದೂ ಅಹಂಭಾವದಿಂದ ಬೀಗಿ ಒಬ್ಬರನೊಬ್ಬರು ದೂರವಿರಿಸಿಕೊಂಡರೆ ಪರಸ್ಪರ ಅಸ್ಪರ್ಶ್ಯರಾಗಿ ಜೀವನವಿಡೀ ಸಂಕಟದಲ್ಲಿ ಬಾಳುತ್ತಾರೆ. ಮನಸ್ಸಿನ ಈ ಮಲಿನತೆಯನ್ನು ನೀಗಿಸಿಕೊಂಡರೆ ತನು-ಮನಗಳೆರಡರಲ್ಲೂ ಒಂದಾಗಿ ಆದರ್ಶ ದಂಪತಿಗಳಾಗಿ, ಸುಖ ಸಂತೋಷಗಳಿಂದ ಬಾಳುತ್ತಾರೆ. ದೇವರು ಈ ಜಗತ್ತನ್ನು ಹೆಣ್ಣಿನಂತೆ ಸುಂದರವಾಗಿ ಸೃಷ್ಟಿಸಿದ್ದರೂ ಲೋಕದ ಜನರು ತಮ್ಮೊಳಗೆ ಮಾನಸಿಕ ಅಂತರವನ್ನು ಹೆಚ್ಚಿಸಿಕೊಂಡು ನರಳುತ್ತಿದ್ದಾರೆ” ಎಂಬುದೇ ಅಕ್ಕ ಮಹಾದೇವಿಯ ಈ ವಚನದ ಸಾರ.

ಓದುಗರು ಗಮನಿಸಿ :- ಗಂಡನೊಂದಿಗೆ ಮತಭೇದ, ಮನಸ್ತಾಪಗಳಿಂದ ನೊಂದು ಅಕ್ಕ ಮಹಾದೇವಿ ಸ್ವತಃ ಇಂತಹದ್ದೊಂದು ಸೂತಕಕ್ಕೆ ಒಳಗಾದಳು; ಮುಂದೆ ಸಂಸಾರ ಬಂಧನದಿಂದ ವಿಮುಖಳಾಗಿ ವಿರಾಗಿಣಿಯಾದ ಆಕೆ ಮೈ ಮೇಲಿನ ಬಟ್ಟೆಗಳನ್ನು ಕಿತ್ತೊಗೆದು ಬೆತ್ತಲಾಗಿ ತನ್ನ ಆರಾಧ್ಯ ದೈವ ಚೆನ್ನಮಲ್ಲಿಕಾರ್ಜುನನಿಗೆ ತನ್ನನ್ನು ಸಮರ್ಪಿಸಿಕೊಂಡು ಶರಣೆಯಾದಳು ಎಂಬುದು ಐತಿಹ್ಯ.

ಕನ್ನಡದ ಒಂದು ಟಿ.ವಿ. ವಾಹಿನಿ ‘ಆದರ್ಶ ದಂಪತಿಗಳು’ ಎಂಬ ಸ್ಪರ್ಧಾತ್ಮಕವಾದ ಕಾರ್ಯಕ್ರಮವನ್ನು ಅಲ್ಲಲ್ಲಿ ಏರ್ಪಡಿಸಿ, ಚಿತ್ರೀಕರಿಸಿ, ವೀಕ್ಷಕರಿಗಾಗಿ ಪ್ರಸಾರ ಮಾಡುತ್ತಿದೆ. ಇಂತಹ ಅಪ್ರಸ್ತುತ ಅರ್ಥವಿಹೀನ ಕಾರ್ಯಕ್ರಮವನ್ನು ಒಂದು ಪ್ರಹಸನವೆಂಬಂತೆ ಹಲವು ಸಂಘ ಸಂಸ್ಥೆಗಳೂ ಅನುಕರಿಸಿ ನಡೆಸುತ್ತವೆ. ವೀಕ್ಷಕರು ತಿಳಿದುಕೊಂಡಿರುವಂತೆ ವೇದಿಕೆಯಲ್ಲಿ ಹಲವು ಹಾಸ್ಯಾಸ್ಪದ ಪ್ರಶ್ನೆಗಳನ್ನು ಕೇಳಿ ಪಡೆಯುವ ಉತ್ತರಗಳ ಮೂಲಕ ಈ ‘ಆದರ್ಶ ದಂಪತಿ’ಗಳನ್ನು ಆರಿಸಿ ಸನ್ಮಾನಿಸಲಾಗುತ್ತದೆ. ಕೇವಲ ಒಂದೆರಡು ಘಂಟೆಗಳ ವೇದಿಕೆಯ ಮೇಲಿನ ಕಾರ್ಯಕ್ರಮ ದಿಂದ ‘ಆದರ್ಶ ದಂಪತಿ’ಗಳಾಗಿ ಮೂಡಿ ಬರಲು ಸಾಧ್ಯವೇ? ಹಾಗೆ ನೋಡಿದರೆ ನೋವು ನಲಿವುಗಳನ್ನು ಹಂಚಿಕೊಂಡು, ಸಿಟ್ಟುಸೆಡವುಗಳನ್ನು ನುಂಗಿಕೊಂಡು, ಕಷ್ಟ-ಕಾರ್ಪಣ್ಯ, ಸೋಲು- ಗೆಲುವುಗಳನ್ನು ಅನುಭವಿಸಿ, ಅಭಿಪ್ರಾಯ ಭೇದಗಳನ್ನು ಬದಿಗಿರಿಸಿ ಕೊನೆಯ ತನಕ ಸಾಮರಸ್ಯದ ಬಾಳುವೆ ನಡೆಸುವ ದಂಪತಿಗಳೆಲ್ಲರೂ ‘ಆದರ್ಶ ದಂಪತಿ’ಗಳೇ ಅಲ್ಲವೇ? ಸಂಸಾರ ಸಾಗರದಲ್ಲಿ ದೀರ್ಘಕಾಲ ಈಸಿ ಪರಸ್ಪರ ಅರ್ಥೈಸಿಕೊಂಡು, ಅನುಭವ ಹರಳುಗಟ್ಟಿ, ಪ್ರೇಮಾನುರಾಗಗಳು ಕೆನೆಯೊಡೆದರೆ ಮಾತ್ರ ‘ಆದರ್ಶದಂಪತಿ’ಗಳಾಗಲು ಸಾಧ್ಯವಲ್ಲವೇ? ಇಂತಹ ಅನುರೂಪದ ದಂಪತಿಗಳು ಕೆಲವೆಡೆಗಳಲ್ಲಾದರೂ ಕಾಣಲು ಸಿಗುವರಲ್ಲವೇ? ಅನ್ಯೋನ್ಯ ಬಾಳುವೆ ನಡೆಸಿ ಗತಿಸಿದ ನಮ್ಮ ಹಿರಿಯರೆಲ್ಲರೂ “ಆದರ್ಶ ದಂಪತಿ”ಗಳೆಂಬ ಹಣೆಪಟ್ಟಿ ಕಟ್ಟಿಕೊಂಡೇ ಜೀವಿಸಿದ್ದರೇ?

ಇನ್ನೊಂದು ವಾಹಿನಿ ‘ವರ್ಷದ ಶ್ರೇಷ್ಠ ಕನ್ನಡಿಗ’ ಮತ್ತು ‘ವರ್ಷದ ಪರಿಪೂರ್ಣ ಮಹಿಳೆ’ ಮೊದಲಾದ ಕಾರ್ಯಕ್ರಮಗಳನ್ನು ವರ್ಷಕ್ಕೊಂದು ಬಾರಿ ಏರ್ಪಡಿಸಿ ಪ್ರಸಾರ ಮಾಡುತ್ತದೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ಹೆಸರುವಾಸಿಯಾಗಿರುವ ಹಲವು ವ್ಯಕ್ತಿಗಳ ಹೆಸರುಗಳನ್ನು ಸೂಚಿಸಿ ಒಬ್ಬರನ್ನು ಎಸ್.ಎಂ.ಎಸ್. ಮತದಾನದ ಮೂಲಕ “ವರ್ಷದ ಶ್ರೇಷ್ಠ ಕನ್ನಡಿಗ” ನನ್ನಾಗಿ ಆರಿಸುವಂತೆ ವೀಕ್ಷಕರನ್ನು ವಿನಂತಿಸಿಕೊಳ್ಳಲಾಗುತ್ತದೆ. ಇಲ್ಲಿ ಕೂಡಾ ಸಾಕಷ್ಟು ಪ್ರಚಾರವನ್ನು ಮೊದಲೇ ಗಿಟ್ಟಿಸಿಕೊಂಡು ಸಂಪನ್ಮೂಲಗಳನ್ನೂ, ಪ್ರಭಾವಗಳನ್ನೂ ಹೊಂದಿರುವ ಜನಪ್ರಿಯ ವ್ಯಕ್ತಿಗಳೇ ಆರಿಸಿ ಬರುತ್ತಾರೆ. ತಮ್ಮ ಇತಿ-ಮಿತಿಗಳಲ್ಲಿ ಅದ್ಭುತವೆನಿಸುವಷ್ಟು ಸಾಮಾಜಿಕ-ಸಮಾಜಮುಖೀ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಯೋಗ್ಯ ಸಾಮಾನ್ಯ ವ್ಯಕ್ತಿಗಳಿಗೆ ಇಲ್ಲಿ ಆರಿಸಿ ಬರುವ ಅವಕಾಶಗಳೇ ಇಲ್ಲ.

ಇನ್ನು, ವರ್ಷದ ‘ಪರಿಪೂರ್ಣ ಮಹಿಳೆ’ಯ ವಿಚಾರ. ಈ ಪ್ರಶಸ್ತಿಗೆ ತಮ್ಮನ್ನು ತಾವೇ ಪರಿಪೂರ್ಣ ಮಹಿಳೆ ಎಂದು ಬಿಂಬಿಸಿ ಮಹಿಳೆಯರು ಅರ್ಜಿ ಸಲ್ಲಿಸಬೇಕಾಗಿರುವುದು ಒಂದು ಅನಿವಾರ್ಯವಾದ ವಿಪರ್ಯಾಸ. (‘ಆದರ್ಶ ಶಿಕ್ಷಕ-ಶಿಕ್ಷಕಿ’ ಪ್ರಶಸ್ತಿಗೂ ಇದೇ ರೀತಿ ಸರಕಾರೀ ಇಲಾಖೆಗಳಿಗೆ ಅರ್ಜಿ ಸಲ್ಲಿಸಬೇಕಾಗಿದೆ ಎಂದು ಕೇಳಿದ್ದೇವೆ.)

ಪರಿಪೂರ್ಣ ಮಹಿಳೆಯಾಗಲೀ, ಮಹನೀಯನಾಗಲೀ ಈ ಲೋಕದಲ್ಲಿ ಹುಟ್ಟಿ ಬರಲು ಸಾಧ್ಯವೇ ಇಲ್ಲ ಅಲ್ಲವೇ? ಎಲ್ಲರಲ್ಲಿಯೂ ಒಂದಲ್ಲ ಒಂದು ವಿಧದ ದೌರ್ಬಲ್ಯವಾಗಲೀ, ಕೊರತೆಯಾಗಲೀ, ದೋಷವಾಗಲಿ ಇದ್ದೇ ಇರುತ್ತದೆ. ನಾವು ಭಗವಂತನನ್ನು ಅಕಳಂಕ, ನಿರಂಜನ, ಪರಿಪೂರ್ಣ, ದೋಷರಹಿತ ಎಂದು ಹಾಡಿ ಹೊಗಳಿ ಸ್ತುತಿಸುತ್ತೇವೆ. ಗಾಢವಾಗಿ ಆಲೋಚಿಸಿದರೆ ಪರಿಪೂರ್ಣತೆಯನ್ನು ಪಡೆಯಲು ದೇವರಿಂದಲೂ ಅಸಾಧ್ಯ ಎಂದನ್ನಿಸುವುದಿಲ್ಲವೇ?

ಆದರ್ಶ ದಂಪತಿಗಳಾಗಲೀ, ಆದರ್ಶ ವ್ಯಕ್ತಿಗಳಾಗಲೀ ಸಾಮಾಜಿಕರಿಂದಲೇ ಗುರುತಿಸಲ್ಪಟ್ಟು ಸಮಾಜ-ಸಮುದಾಯದ ಮಧ್ಯದಿಂದಲೇ ಮೂಡಿ ಬರಬೇಕಲ್ಲದೆ, ಟಿ.ವಿ. ವಾಹಿನಿಗಳಾಗಲೀ, ಗುಂಪು-ಸಂಘಟನೆಗಳಾಗಲೀ ಸ್ಪರ್ಧೆಗಳನ್ನು ನಡೆಸಿ ನೀಡುವ ನಗಣ್ಯ ಪ್ರಶಸ್ತಿ-ಸನ್ಮಾನಗಳಿಂದ ಅಲ್ಲ. ಇಂತಹ ಪ್ರಶಸ್ತಿಗಳು ದೊರಕಿದಷ್ಟೇ ವೇಗದಲ್ಲಿ ತಮ್ಮ ಹೊಳಪನ್ನು ಕಳೆದುಕೊಳ್ಳುತ್ತವೆ. □

## ದುರ್ಗೆಯ ನವ ಅವತಾರಗಳು

(.....2ನೇ ಪುಟದಿಂದ)

ಆರಾಧನೆಯಿಂದ ಶರೀರದ ವ್ಯಾಧಿ ನಿವಾರಣೆಯಾಗುವುದು.

**5. ಸ್ಕಂದ ಮಾತಾ**

ಶ್ಲೋಕ : ಸಿಂಹಾಸನಗತಾ ನಿತ್ಯಂ ಪದ್ಮಾಶ್ರೀ ತಕರದ್ವಯೆಮ್ ।

ಶುಭದಾಸ್ತು ಸದಾದೇವಿ ಸ್ಕಂದಾಮಾತಾ ಯಶಸ್ವಿನಿ ॥

ಜಗನ್ಮಾತೆಯ 5ನೇ ಅವತಾರವೇ ‘ಸ್ಕಂದಮಾತಾ‘ ದೇವಾಸುರರ ಸಂಗ್ರಾಮದಲ್ಲಿ ಸೇನಾಧಿಪತಿಯಾಗಿದ್ದ ಬಾಲರೂಪದ ಕಾರ್ತಿಕೇಯನನ್ನು ತನ್ನ ತೊಡೆಯಲ್ಲಿರಿಸಿಕೊಂಡಿರುವ ಮಾತೆಗೆ ನಾಲ್ಕು ಕೈಗಳಿದ್ದು ಕಮಲ ಮೊದಲಾದ ವಸ್ತುಗಳಿಂದ ಅಲಂಕೃತಳಾಗಿ ಕಾಂತಿಯುತಳಾದ ಈಕೆಯು ಸಿಂಹವಾಹಿನಿಯಾಗಿದ್ದಾಳೆ.

‘ವಿಶುದ’ ಚಕ್ರದಲ್ಲಿ ನೆಲೆನಿಂತ ಸಾಧಕನ ಮನಸ್ಸು ಈ ಲೌಕಿಕ ಬಂಧನಗಳಿಂದ ಮುಕ್ತವಾಗುತ್ತದೆ. ಇದರಿಂದ ವೃತ್ತಿಯಲ್ಲಿ ಏಕಾಗ್ರತೆ ಸಾಧಿಸಬಹುದು. ಮಾತೆಯ ಜೊತೆಯಲ್ಲಿ ಸ್ಕಂದನೂ ಆರಾಧಿಸಲ್ಪಡುವುದರಿಂದ ಹೆಚ್ಚಿನ ಫಲ ಪ್ರಾಪ್ತಿ ಸಾಧ್ಯ.

**6. ಕಾತ್ಯಾಯನೀ**

ಶ್ಲೋಕ : ಚಂದ್ರಾಸೋಜ್ಜ್ವ ಲಕರಾ ಶಾರ್ದೂಲವರ ವಾಹನ ।

ಕಾತ್ಯಾಯನೀ ಶುಭಂ ಪದ್ಯಾದ್ದೈವೀ ದಾನವ ಘಾತಿನೀ॥

ಆರನೇ ದಿನದ ಉಪಾಸನೆಯಲ್ಲಿ ‘ಕಾತ್ಯಾಯಿನೀ’ಯ ಉಪಾಸನೆಯು ನಡೆಯುವುದು ಲೋಕಕಂಟಕ ದಾನವ ಮಹಿಷ ವಧೆಗಾಗಿ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರ ಅಂಶ ಸಂಭೂತಳಾದ ದೇವಿಯ ಅವಿರ್ಭಾವವಾದೊಡನೆ ಅವಳನ್ನು ಮಹರ್ಷಿ ಕಾತ್ಯಾಯನರು ಮೊದಲು ಪೂಜಿಸಿದರಿಂದ ‘ಕಾತ್ಯಾಯನೀ’ ಎನಿಸಲ್ಪಟ್ಟಳು.

ಇವಳಿಗೆ ನಾಲ್ಕು ಭುಜಗಳಿದ್ದು ಅಭಯ ಕರಮುದ್ರೆಗಳು, ಖಡ್ಗ, ಕಮಲಪುಷ್ಪಗಳೂ ಕೈಯಲ್ಲಿ ತೋರಿಬರುತ್ತದೆ, ಈಕೆಯೂ ಸಿಂಹವಾಹಿನಿ.

ಈಕೆಯ ಉಪಾಸನೆಯ ಸಾಧಕನ ಮನವು ‘ಆಜ್ಞಾಚಕ್ರ’ದಲ್ಲಿದ್ದು, ಇದರಿಂದ ಅರ್ಥ, ಧರ್ಮ, ಕಾಮ, ಮೋಕ್ಷಗಳೆಂಬ ನಾಲ್ಕು ಫಲಗಳು ಪ್ರಾಪ್ತವಾಗುತ್ತದೆ.

**7. ಕಾಲರಾತ್ರಿ**

ಶ್ಲೋಕ : ಕಾಲರಾತ್ರಿರ್ಮ ಹಾರಾತ್ರಿರ್ಮೊ ಹರಾತ್ರಿಶ್ಚಧಾರುಣ ।

ತ್ವಶ್ರೀಸ್ತ್ವಮೀ ಶ್ವರೀತ್ವಂ ಹ್ರೀಸ್ತ್ವಂ ಬುದ್ಧ ಭೋಧ ಲಕ್ಷಣಾ ।

7ನೇ ದಿನದಲ್ಲಿ ದುರ್ಗೆಯನ್ನು ‘ಕಾಲರಾತ್ರಿ’ ಎಂದು ಪೂಜಿಸಲಾಗುತ್ತದೆ.

ಭಯಂಕರ ಸ್ವರೂಪಿಯಾದ ಇವಳ ಮೈಬಣ್ಣ ಕಪ್ಪು, ಕೆದರಿದ ಕೂದಲು, ಕೆಂಪಾದ ಕಣ್ಣು ಇದ್ದು ಮೂಗಿನಿಂದ ಬೆಂಕಿಯ ಜ್ವಾಲೆ ಹೊರಬರುತ್ತದೆ. ವರದ ಹಸ್ತ ಅಭಯ ಹಸ್ತೆಯಾಗಿ ಕಬ್ಬಿಣದ ಮುಳ್ಳು ಹಾಗೂ ಕತ್ತಿಯನ್ನು ಉಳಿದ ಕೈಯಲ್ಲಿ ಹಿಡಿದಿರುತ್ತಾಳೆ. ಕತ್ತೆ ಇವಳ ವಾಹನ.

‘ಸಹಸ್ರಾರಚಕ್ರ’ದಲ್ಲಿ ಕೇಂದ್ರೀಕೃತವಾದ ಸಾಧಕನು ಈಕೆಯ ಉಪಾಸನೆಯಿಂದ ಅಕ್ಷಯ ಪುಣ್ಯಗಳನ್ನು ದಕ್ಕಿಸಿಕೊಳ್ಳುತ್ತಾನೆ. ಶುಭದಾಯಕಳಾದ ಈಕೆಗೆ ಶುಭಶಂಕರೀ ಎಂದೂ ಹೆಸರಿಡಲಾಗಿದೆ.

**8) ಮಹಾಗೌರೀ**

ಶ್ಲೋಕ : ಶ್ವೇತೇ ವೃಷೇ ಸಮಾರೂಢಾ ಶ್ವೇತಾಂಬರ ಧರಾ ಶುಚಿಃ ।

ಮಹಾಗೌರೀ ಶುಭಂ ದದ್ಯಾನ್ಮಹಾದೇವ ಪ್ರಮೋದದಾ ॥

ಮಾತೆಯ ಎಂಟನೇ ಸ್ವರೂಪವೇ ಮಹಾಗೌರೀ. ಬಿಳಿ ಮೈಕಾಂತಿಯುಳ್ಳ ಇವಳ ಕೈಯಲ್ಲಿ ಅಭಯ ಹಸ್ತಗಳೂ ತ್ರಿಶೂಲ ಮತ್ತು ಡಮರುಗಗಳೂ ಗೋಚರಿಸುತ್ತದೆ. ಇವಳ ವಾಹನ ವೃಷಭ.

ಮಹಾಗೌರಿಯ ಉಪಾಸನೆಯಿಂದ ಆರ್ತ ಭಕ್ತರ ‘ಅಸಂಭವ ಕಾರ್ಯಗಳೂ ಸಂಭವನೀಯವಾಗುತ್ತವೆ.

**9. ಸಿದ್ಧಿ ರಾತ್ರೀ**

ಶ್ಲೋಕ : ಸಿದ್ಧಿ ಗಂಧರ್ವಯಕ್ಷದ್ಯಮರ ಸುರ್ವರಮರ್ರೈರಪಿ/

ಸೇದ್ಯಮಾಸಾ ಸದಾ ಭೂಯಾತ್ ಸಿದ್ಧಿದಾ ಸಿದ್ಧಿದಾಯಿನೀ

ಲೋಕಮಾತೆಯ ಒಂಭತ್ತನೇ ರೂಪಕ್ಕೆ ಸಿದ್ಧಿರಾತ್ರಿ ಂದು ಹೆಸರು.

ಕಮಲಪುಷ್ಪದ ಮೇಲೆ ವಿರಾಜಮಾನಳಾದ ಈಕೆಗೆ ನಾಲ್ಕು ಭುಜಗಳಿದ್ದು ಶಂಖ, ಚಕ್ರ ಗಧೆ ಪದ್ಮಗಳಿಂದ ಶೋಭಿಸುತ್ತಾಳೆ.

ಅಣಿಮಾದಿ ಅಷ್ಟ ಸಿದ್ಧಿಗಳನ್ನು ಸಾಧಿಸುವಾತನು ಈಕೆಯ ಉಪಾಸನೆ ಮಾಡಿಕೊಳ್ಳಬೇಕು. ಸಿದ್ಧಿರಾತ್ರಿ ಉಪಾಸನೆಯಿಂದ ವಿಷಯಭೋಗಗಳು ಶೂನ್ಯವಾಗಿ ಬ್ರಹ್ಮಾಂಡದ ಮೇಲೆ ವಿಜಯ ಪಡೆಯುವ ಸಾಮರ್ಥ್ಯ ಹೊಂದುತ್ತಾನೆ.

ಹೀಗೆ ಒಂಬತ್ತು ದಿನ ಒಂಭತ್ತು ಸ್ವರೂಪದಲ್ಲಿ ಉಪಾಸಿಸಲ್ಪಡುವುದರಿಂದ ಆದಿಪರಾಶಕ್ತಿಯ ಬಗ್ಗೆ ಸಾಕಷ್ಟು ತಿಳಿದುಕೊಂಡು ವ್ರತವನ್ನು ಆಚರಿಸಿದ್ದಾದರೆ ಮಾತ್ರಾ ಆಕೆಯ ಸಂಪೂರ್ಣ ಒಲುಮೆಗೆ ಪಾತ್ರರಾಗಬಹುದು.

ನಮ್ಮಲ್ಲಿ ಅನೇಕ ವಿಧದ ಕೌಶಲ್ಯ ಪ್ರಾವೀಣ್ಯತೆ ಇದೆ. ಅವು ಸಂಪೂರ್ಣ ಸಿದಿಬೇಕಾದರೆ ನಮ್ಮಲ್ಲಿರುವ ದುಷ್ಟಸ್ವಭಾವ ದುಷ್ಟಪ್ರವೃತ್ತಿಗಳು ಹೊರಬೀಳಬೇಕು. ಜಗನ್ಮಾತೆಯ ಆರಾಧನೆಯಿಂದ ಮಾತ್ರ ಈ ಸಾಧನೆ ಸಾಧ್ಯ. ಆದ್ದರಿಂದ ನವರಾತ್ರಿಯ ಒಂಭತ್ತು ದಿನವೂ ದೇವೀ ವ್ರತದಲ್ಲಿದ್ದು ಬೇರೆ ಬೇರೆ ಸ್ವರೂಪದಲ್ಲಿರುವ ಮಾತೆಯನ್ನು ಅನನ್ಯ ಭಕ್ತಿಯಿಂದ ಪೂಜಿಸೋಣ. □

## “ಸ್ಥಾನಿಕ ಬ್ರಾಹ್ಮಣ ಸಮಾಜ ನಮಗೆ ಅತ್ಯಂತ ಪ್ರೀತಿ ಪಾತ್ರವಾಗಿರುವ ಸಮಾಜ”

(.....1ನೇ ಪುಟದಿಂದ)

ಹೀಗೆ ಒಟ್ಟಾಗಿ ಶ್ರೀ ಪೀಠಕ್ಕೆ ನಿಷ್ಠೆಯನ್ನು ತೋರಿಸುತ್ತಾ ಬಂದಿದ್ದಾರೆ. ಆದ್ದರಿಂದ ಈ ವಿಶೇಷತೆಯನ್ನು ನೆನಪಿಸಿಕೊಳ್ಳಲು ಮತ್ತು ಸ್ಮರಣೀಯವಾಗಿ ಉಳಿಯುವಂತೆ ಮಾಡಲು ಮುಂದಿನ ವರ್ಷ ವಿಶಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದೆಂದು ನಿರ್ಣಯಿಸಲಾಗಿದೆ. ಸ್ಥಾನಿಕ ಬ್ರಾಹ್ಮಣ ಸಮಾಜದವರು ಮತ್ತು ಸಂಘಗಳ ಪ್ರತಿನಿಧಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಹಕರಿಸಬೇಕೆಂದು ಶ್ರೀ ಶೃಂಗೇರಿ ಮಠದ ಧರ್ಮಾಧಿಕಾರಿಗಳಾದ ಶ್ರೀ ಕೆ. ಸತ್ಯಶಂಕರ ಬೊಳ್ಳಾವ ಅವರು ಪ್ರಾಸ್ತಾವಿಕ ನುಡಿಯಲ್ಲಿ ತಿಳಿಸಿದರು. ನಿವೃತ್ತ ಉಪನ್ಯಾಸಕರಾದ ಮ.ನಾ. ಹೆಬ್ಬಾರ್ ಜಗದ್ಗುರುಗಳ ದಿವ್ಯ ಸನ್ನಿಧಿಯಲ್ಲಿ ಭಾಮಿನಿ ಷಟ್ಪದಿಯಲ್ಲಿ ತಾನು ರಚಿಸಿದ “ಶ್ರೀ ಶ್ರೀ ಗುರುಚರಣ ಕಮಲಕ್ಕೆ ನಮನ” ಎಂಬ ಕಾವ್ಯವನ್ನು ವಾಚಿಸಿದರು. ಬೆಳಗ್ಗೆ ಲಘು ಉಪಹಾರ ಮತ್ತು ಮಧ್ಯಾಹ್ನ ವಿಶೇಷ ಪ್ರಸಾದ ಭೋಜನದ ಅಚ್ಚುಕಟ್ಟಾದ ವ್ಯವಸ್ಥೆಯೂ ಎಲ್ಲರಿಗೂ ಖುಷಿ ನೀಡಿತು.

ಉಡುಪಿಯಿಂದ ಅಂದು ಬೆಳಗ್ಗೆ 7-00ಗಂಟೆಗೆ ಉಡುಪಿಯ ಶ್ರೀ ಶಾರದಾ ಮಂಟಪದಿಂದ ಶ್ರೀ ಶೃಂಗೇರಿಗೆ ಪರಮಗುರುಗಳಾದ ಶ್ರೀ ಶ್ರೀ ಭಾರತೀತೀರ್ಥರ ಚರಣ ಕಮಲಕ್ಕೆ ಭಕ್ತಿಯಿಂದ ಶರಣಾಗಲು ಸಮಾಜ ಬಾಂಧವರು ಪ್ರಯಾಣಿಸಿದ್ದರು. ಚಾತುರ್ಮಾಸ್ಯ ಕಾರ್ಯಕ್ರಮ ಮುಗಿಸಿ ಅಪರಾಹ್ನ 3-00 ಗಂಟೆಗೆ ಶೃಂಗೇರಿಯಿಂದ ನಿರ್ಗಮಿಸಿ ಶ್ರೀ ಸಿ. ವಾಸುದೇವರಾಯರು ಸೋಮೇಶ್ವರದಲ್ಲಿ ನೀಡಿದ ಲಘುಉಪಹಾರ ಸೇವಿಸಿ ಸಂಜೆ 6-00 ಗಂಟೆಗೆ ಉಡುಪಿಯನ್ನು ತಲುಪಿದರು. ಶ್ರೀ ಸಿ. ವಾಸುದೇವರಾಯರಿಗೆ ಮತ್ತು ಚಾತುರ್ಮಾಸ್ಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಹಕರಿಸಿದ ಎಲ್ಲಾ ಸಮಾಜಬಾಂಧವರಿಗೆ ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಕಾರ್ಯದರ್ಶಿಗಳಾದ ಶ್ರೀ ವೈ. ಭುವನೇಂದ್ರ ರಾಯರು ಹೃತ್ಪೂರ್ವಕವಾದ ಕೃತಜ್ಞತೆಯನ್ನು ಅರ್ಪಿಸಿದ್ದಾರೆ. □

## ವಧು-ವರರ ವೇದಿಕೆ

**ವಧು-ವರರ ಮಾಹಿತಿ ಸಂಗ್ರಹ :**

ತಾ.09-10-2008ನೇ ಗುರುವಾರ ವಿಜಯದಶಮಿಯಂದು ಬೆಳಿಗ್ಗೆ ಗಂಟೆ 9-30ರಿಂದ ಸಮಾಜದ ವಿವಾಹಯೋಗ್ಯ ವಧು-ವರರ ನೋಂದಾವಣೆ, ವಿವಿಧ ಮಾಹಿತಿ ಮೊದಲಾದವುಗಳನ್ನು ಆಸಕ್ತ ಹೆತ್ತವರು ಪಡೆದುಕೊಂಡು ಪರಸ್ಪರ ವಿಚಾರ ವಿನಿಮಯ ಮಾಡಲು ಅವಕಾಶವಿದೆ.

**- ಅಧ್ಯಕ್ಷರು, ವಧೂವರರ ವೇದಿಕೆ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ**


## ಸದಾಶಯ

ಸ್ಥಾನಿಕ ಬ್ರಾಹ್ಮಣ ವಧೂ-ವರರ ಮಾಹಿತಿ ಕೇಂದ್ರ

ಚಿಟ್ಪಾಡಿ, ಉಡುಪಿ.

**: ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿರಿ :**

**ಎಂ. ಸದಾನಂದರಾವ್ ಮತ್ತು ಎಂ. ಸಂತೋಷರಾವ್, ಚಿಟ್ಪಾಡಿ, ಉಡುಪಿ**

Ph : 2522638, 2523394